ಕರ್ನಾಟಕ ವಿಧಾನಸಭೆ

KARNATAKA LEGISLATIVE ASSEMBLY

Wednesday, the 5th July 1978/Ashada 14, 1900 S.E

The House met in the Assembly Chamber, Vidhana Soudha, at Twelve of the Clock.

[MR. SPEAKER (SRI P. VENKATARAMANA) in the Chair]

STARRED QUESTIONS
(to which Oral Answers were given)

Misappropriation in Hassan District Co-operative Bank

83. SRI K. H. HANUME GOWDA (Hassan)—Will the Minister of State for Co-operation be pleased to state :—

(a) whether it is a fact that the Reserve Bank Authorities have conducted an enquiry about the malpractices committed in the Hassan District Co-operative Bank ;

(b) the detailed list prepared by the Reserve Bank about the malpractices may be furnished ;

(c) the amount of loss to the Bank due to these malpractices ;

(d) the action taken against the persons responsible for these malpractices ?

SRI V. M. KUSNOOR (Minister of State for Co-operation)--

(a) The Reserve Bank Authorities have conducted a formal enquiry.

(b) The details cannot be furnished since the enquiry report is confidential.

(c) This question does not arise at present, since the action has already been taken against the concerned and amount is being recovered.

(d) The five officials who had been kept under suspension for being involved in the malpractices and four of them have been taken to duty. The disciplinary action will have to be taken after the investigation and enquiry about the malpractices are completed.

ಶ್ರೀ ಕೆ. ಎಚ್. ಹನುಮೇಗೌಡ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ನನ್ನ (೫) ಪ್ರಶ್ನೆಗೆ ಉತ್ತರವಾಗಿ ಸಂಬಂಧಪಟ್ಟವರ ಮೇಲೆ ಕ್ರಮ ಜರುಗಿಸಲಾಗಿದ್ದು, ಹಣ ವಸೂಲಿ ಮಾಡುತ್ತಿರುವುದರಿಂದ ಸಧ್ಯಕ್ಕೆ ಈ ಪ್ರಶ್ನೆ ಉದ್ಭವಿಸುವುದಿಲ್ಲವೆಂದು ಹೇಳಿದ್ದಾರೆ. ಈ ಅವ್ಯವಹಾರದಿಂದ ಬ್ಯಾಂಕಿನ ಎಷ್ಟು ಹಣ ಲುಕ್ಸಾನಾಗಿದೆ ? ಆದರಲ್ಲಿ ಈಗ ವಸೂಲಿ ಮಾಡಿರುವ ಹಣವೆಷ್ಟು ಮತ್ತು ಇನ್ನೂ ಮಾಡ ಬೇಕಾಗಿರುವ ಹಣವೆಷ್ಟು ?

† ಶ್ರೀ ವಿ. ಎಂ. ಕುಸನೂರ್.—ಬ್ಯಾಂಕಿಗೇನೂ ಈ ಅವ್ಯವಹಾರದಿಂದ ಲುಕ್ಸಾನಾಗಿಲ್ಲ. ಅವ್ಯವಹಾರ ನಡೆಸಿರುವವರ ವಿವರ ಈ ರೀತಿ ಇದೆ ಶ್ರೀ ಹೆಚ್. ಪಿ. ಮಂಜುನಾಥ್ ೧೮ ಸಾವಿರ, ಜವರೇಗೌಡ ೧ ಲಕ್ಷ, ವೆಂಕಟೇಗೌಡ ೫೦ ರೂಪಾಯಿ ಮತ್ತು ಕೆ. ಕೆ. ರೇವಣ್ಣ ಎನ್ನುವವರು ಎಷ್ಟು ಹಣ ಆಪರಾ–ತಪರಾ ಮಾಡಿದ್ದಾರೆನ್ನುವುದನ್ನು ಇನ್ನೂ ಕಂಡುಹಿಡಿದಿಲ್ಲ ; ಹಾಗೂ ಶ್ರೀ ಹೆಚ್. ಟಿ. ಮಾಲಿಂಗಗೌಡ ಅವರು ೪೦ ಸಾವಿರ ರೂಪಾಯಿಗಳ ಆಪರಾ–ತಪರಾ ಮಾಡಿದ್ದಾರೆ.

ಶ್ರೀ ಪಿ. ರಾಮದೇವ್.—ಇವರೆಲ್ಲ ಸಂಘದ ಡೈರಕ್ಟರೋ ಅಥವಾ ನೌಕರರೋ ?

ಶ್ರೀ ವಿ. ಎಂ. ಕುಸನೂರ್.—ಸೂಪರವೈಸರ್ಸ್.

ಶ್ರೀ ಕೆ. ಎಚ್. ಹನುಮೇಗೌಡ —ರಿಜರ್ವ್ ಬ್ಯಾಂಕಿನವರು ಬಂದು ತನಿಖೆ ನಡೆಸಿದ ಮೇಲೆ ಈ ವಿಚಾರ ಬೆಳಕಿಗೆ ಬಂದಿದೆ ಎಂದು ನನ್ನ ಪ್ರಶ್ನೆಗೆ ಉತ್ತರಿಸಲಾಗಿದೆ. ಸಹಕಾರ ಇಲಾಖೆಯಲ್ಲಿ ಬೇಕಾದಷ್ಟು ಸಿಬ್ಬಂದಿ ಇದೆ. ಅಷ್ಟೇ ಅಲ್ಲದೆ ಅಲ್ಲಿನ ಡೆಪ್ಯುಟಿ ರಿಜಿಸ್ಟ್ರಾರ್‌ರವರು ಈ ಬ್ಯಾಂಕಿನ ಒಬ್ಬ ಡೈರೆಕ್ಟರ್ ಕೂಡ ಆಗಿರುತ್ತಾರೆ. ಇಷ್ಟೆಲ್ಲಾ ಇದ್ದರೂ, ರಿಜರ್ವ್ ಬ್ಯಾಂಕಿನವರು ಬಂದು ಈ ಆಪರಾ–ತಪರಾವನ್ನು ಕಂಡುಹಿಡಿಯುವವರೆಗೂ, ಇವರು ಏನು ಮಾಡುತ್ತಿದ್ದರು ?

ಶ್ರೀ ವಿ. ಎಂ. ಕುಸನೂರ್.—೧೯೭೪–೭೫ ಮತ್ತು ೧೯೭೫–೭೬ನಲ್ಲಿ ಏನೂ ತೊಂದರೆ ಇರಲಿಲ್ಲ ; ಈ ತೊಂದರೆಯಾಗಿರುವುದು ೧೯೭೬–೭೭ರಲ್ಲಿ. ೧೯೭೬–೭೭ನೇ ಆಕ್ಟೋಬರ್ ತಿಂಗಳಲ್ಲಿ ಈ ಬ್ಯಾಂಕಿಗೆ ಬಂದು ತನಿಖೆ ಮಾಡಿದಾಗ, ಈ ಆಪರಾ–ತಪರಾ ಬೆಳಕಿಗೆ ಬಂದಿತು.

ಶ್ರೀ ಕೆ. ಎಚ್. ಹನುಮೇಗೌಡ.—ಡೆಪ್ಯುಟಿ ರಿಜಿಸ್ಟ್ರಾರ್‌ರವರು ಅಲ್ಲಿನ ಆಡಳಿತ ಮಂಡಲಿ ಸದಸ್ಯರಾಗಿರುತ್ತಾರೆ. ಇವರ ಜೊತೆಗೆ ಜಾಯಿಂಟ್ ರಿಜಿಸ್ಟ್ರಾರು ಮತ್ತು ಅಸಿಸ್ಟೆಂಟ್ ರಿಜಿಸ್ಟ್ರಾರ್ ಅವರು ಆಗಾಗ್ಗೆ ಅಲ್ಲಿಗೆ ಬಂದು ಪೊಕ್ಕಾ ಮಾಡಿ ಲೆಕ್ಕಪತ್ರಗಳನ್ನು ತಪಾಸಣೆ ಮಾಡುತ್ತಿರುತ್ತಾರೆ. ಇಷ್ಟೆಲ್ಲಾ ಇದ್ದರೂ ಕೂಡ, ರಿಜರ್ವ್ ಬ್ಯಾಂಕಿನವರು ಬಂದು ಇದನ್ನು ಕಂಡುಹಿಡಿಯುವತನಕ, ಇಲಾಖಾಧಿಕಾರಿಗಳು ಏನು ಮಾಡುತ್ತಿದ್ದರೆನ್ನುವುದು ನನ್ನ ಪ್ರಶ್ನೆ ?

ಶ್ರೀ ವಿ. ಎಂ. ಕುಸನೂರ್.—ಡೆಪ್ಯುಟಿ ರಿಜಿಸ್ಟ್ರಾರ್‌ರವರು ಆಡಳಿತ ಮಂಡಳಿ ಸದಸ್ಯರಾಗಿರುವುದು ಬ್ಯಾಂಕಿನಲ್ಲಿ, ಆಪರಾ–ತಪರಾ ನಡೆದಿರುವುದು ಸಂಘದಲ್ಲಿ, ಬ್ಯಾಂಕಿನಲ್ಲಲ್ಲ, ರಿಜರ್ವ್ ಬ್ಯಾಂಕಿನವರು ಸೊಸೈಟಿಯಲ್ಲಿ ಇನ್‌ಸ್ಪೆಕ್ಷನ್ ಮಾಡಿದಾಗ, ಆಪರಾ–ತಪರಾ ನಡೆದಿರುವುದು ಕಂಡುಬಂದಿತು.

ಶ್ರೀ ಕೆ. ಎಚ್. ಹನುಮೇಗೌಡ.—ಆಪರಾ–ತಪರಾ ನಡೆದ ಬಗ್ಗೆ ಐದು ಜನರನ್ನು ಸಸ್ಪೆಂಡ್ ಮಾಡಲಾಗಿದ್ದು ಅವರಲ್ಲಿ ನಾಲ್ಕು ಜನರನ್ನು ಮತ್ತೆ ತೆಗೆದುಕೊಳ್ಳಲಾಗಿದೆ. ಹಾಗಿದ್ದರೆ, ಆ ನಾಲ್ಕು ಜನರ ಮೇಲಿದ್ದ ಆಪರಾಧವೇನು ? ಮತ್ತೊಬ್ಬನನ್ನು ವಾಪಸ್ಸು ತೆಗೆದುಕೊಳ್ಳದೆ ಇನ್ನೂ ಸಸ್ಪೆಂಡ್‌ನಲ್ಲಿರುವುದಕ್ಕೆ ಕಾರಣವೇನು ? ಮತ್ತು ಕೆಲಸಕ್ಕೆ ತೆಗೆದುಕೊಳ್ಳಲಾದ ನಾಲ್ಕು ಜನರನ್ನು ಎಷ್ಟು ದಿವಸಗಳ ಕಾಲ ಸಸ್ಪೆಂಡ್‌ನಲ್ಲಿಟ್ಟಿದ್ದರು ?

ಶ್ರೀ ವಿ. ಎಂ. ಕುಸನೂರ್.—ಹಾಸನ ಜಿಲ್ಲಾ ಸಹಕಾರಿ ಬ್ಯಾಂಕ್ ಒಂದು ಸ್ವತಂತ್ರ ಸಂಸ್ಥೆ. ಅಲ್ಲಿನ ಆಧ್ಯಕ್ಷರು ನಾಲ್ಕು ಜನರನ್ನು ಪುನರ್‌ನೇಮಕ ಮಾಡಿಕೊಂಡಿದ್ದಾರೆ. ಶೀಘ್ರ ಕ್ರಮ ತೆಗೆದುಕೊಳ್ಳಲು ಅವರನ್ನು ಸಸ್ಪೆಂಡ್‌ನಲ್ಲಿಡಬೇಕೆಂದು ಸರ್ಕಾರ ಈಗಾಗಲೇ ಆದೇಶ ಕಳುಹಿಸಿದೆ. ತನಿಖಾ ವರದಿ ಇನ್ನೂ ಪೂರ್ಣಗೊಂಡಿಲ್ಲ ; ಅದು ಪೂರ್ಣಗೊಂಡ ಮೇಲೆ ಸಂಬಂಧಪಟ್ಟವರನ್ನು ಸೇವೆಯಿಂದ ಡಿಸ್‌ಮಿಸ್ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಲಾಗುವುದು.

† Indicates that remarks or speeches have not been revised by the members concerned.

ಶ್ರೀ ಕೆ. ಎಚ್. ಹನುಮೇಗೌಡ.—ತನಿಖೆ ನಡೆಯುತ್ತಿರುವಾಗ ಅವರನ್ನು ಸಸ್ಪೆಂಡ್‌ನಲ್ಲಿಡಬಾರದಾಗಿತ್ತು. ಇಟ್ಟಮೇಲೆ ತನಿಖೆ ಮುಗಿಯುವವರೆಗೂ ಅವರನ್ನು ಪುನರ್‌ನೇಮಕ ಮಾಡಿಕೊಳ್ಳಬಾರದಾಗಿತ್ತು. ಅಂದಮೇಲೆ, ತನಿಖೆ ಇನ್ನೂ ಅಪೂರ್ಣವಾಗಿರುವಾಗಲೇ ಅವರನ್ನು ಪುನರ್‌ನೇಮಕ ಮಾಡಿಕೊಳ್ಳಲು ಕಾರಣವೇನು ?

ಶ್ರೀ ವಿ. ಎಂ. ಕುಸನೂರ್.—ಹಿಂದೆ ಇದ್ದ ಅಧ್ಯಕ್ಷರು ಅವರನ್ನು ಪುನರ್ ನೇಮಕ ಮಾಡಿದ್ದಾರೆ ಈಗ ಬಂದಿರುವ ಅಧ್ಯಕ್ಷರಿಗೆ ಅವರನ್ನು ಸಸ್ಪೆಂಡ್‌ನಲ್ಲಿಡಬೇಕೆಂದು ಸರ್ಕಾರದಿಂದ ಆದೇಶ ಕೊಡಲಾಗಿದೆ.

ಶ್ರೀ ಕೆ. ಎಚ್. ಹನುಮೇಗೌಡ.—ತನಿಖೆ ಮುಗಿಯುವವರೆಗೂ ಅವರನ್ನು ಸಸ್ಪೆಂಡ್‌ನಲ್ಲಿಡಬೇಕೆಂದು ಈಗಿರುವ ಅಧ್ಯಕ್ಷರಿಗೆ ಆದೇಶ ಕೊಡುವಿರಾ ?

ಶ್ರೀ ವಿ. ಎಂ. ಕುಸನೂರ್.—ಸಸ್ಪೆಂಡ್ ಮಾಡಲು ಸೂಚನೆ ಕೊಡಲಾಗಿದೆ. ಆದರೆ, ಆದೇನೂ ಆಗಿಲ್ಲ, ಇನ್ನೂ ಹಾಗೆ ಉಳಿದಿದೆ.

ಶ್ರೀ ವಿ. ಎಲ್. ಶಿವಪ್ಪ.—ಮಾನ್ಯ ಸಚಿವರು ಬ್ಯಾಂಕಿನ ಹಣ ದುರುಪಯೋಗವಾಗಿಲ್ಲ : ಸಂಘದ ಹಣ ದುರುಪಯೋಗವಾಗಿದೆ ಎಂದು ತಿಳಿಸಿದ್ದಾರೆ. ಹಾಗಾದರೆ, ರಿಜರ್ವ್ ಬ್ಯಾಂಕಿನವರು ಸಂಘದ ಲೆಕ್ಕ ಪತ್ರಗಳನ್ನು ತನಿಖೆ ಮಾಡಿದರೆ ಅಥವಾ ಬ್ಯಾಂಕಿನ ಲೆಕ್ಕ ಪತ್ರಗಳನ್ನು ತನಿಖೆ ಮಾಡಿದರೆ ?

ಶ್ರೀ ವಿ. ಎಂ. ಕುಸನೂರ್.—ಬ್ಯಾಂಕಿನ ಸೂಪರಟೈಸರ್‌ಗಳು ಮತ್ತು ಸಂಘದ ಕಾರ್ಯದರ್ಶಿ ಇವರುಗಳು ಸೇರಿಕೊಂಡು ಅಪರಾ-ತಪರಾವನ್ನು ಮಾಡಿದ್ದಾರೆ. ಅಪರಾ-ತಪರಾ ಆಗಿರುವುದು ಸಂಘದ ಹಣ. ಐದು ಜನ ಬ್ಯಾಂಕಿನ ಅಧಿಕಾರಿಗಳು ಕೆಲಸ ಸಂಘದ ಹಣವನ್ನು ದುರುಪಯೋಗ ಮಾಡಿದ್ದಾರೆ.

ಹೆಚ್. ಡಿ. ಚೌಡಯ್ಯ.—ರಿಜರ್ವ್ ಬ್ಯಾಂಕಿನವರು ಬಂದು ಲೆಕ್ಕ ಪರಿಶೋಧನೆ ಮಾಡುವವರೆಗೂ ಈ ಅಪರಾ-ತಪರಾ ಕಂಡುಬಂದಿಲ್ಲವೆಂದು ಹೇಳಲಾಗಿದೆ. ಹಾಗಾದರೆ, ಸಹಕಾರಿ ಇಲಾಖೆಯ ಲೆಕ್ಕ ಪರಿಶೋಧಕರು ಇದನ್ನು ತನಿಖೆ ಮಾಡಿರಲಿಲ್ಲವೇ ? ಮಾಡಿದ್ದಲ್ಲಿ, ಅಪರಾ-ತಪರಾವನ್ನು ಕಂಡುಹಿಡಿಯದಿರುವುದು ಲೆಕ್ಕ ಪರಿಶೋಧಕರು ಕರ್ತವ್ಯ ಲೋಪ ಮಾಡಿದಂತಲ್ಲವೇ ? ಕರ್ತವ್ಯ ಲೋಪ ಮಾಡಿದವರ ಮೇಲೆ ಏನು ಕ್ರಮ ತೆಗೆದುಕೊಳ್ಳಲಾಗುವುದು ?

ಶ್ರೀ ವಿ. ಎಂ. ಕುಸನೂರ್.—೧೯೭೪-೭೫ ಮತ್ತು ೧೯೭೫-೭೬ನೇ ಸಾಲಿಗೆ ಸಂಬಂಧಪಟ್ಟಂತೆ ಇಲಾಖಾ ಲೆಕ್ಕಪರಿಶೋಧನೆಯಾಗಿದೆ. ಅಕ್ಟೋಬರ್ ೧೯೭೭ರಲ್ಲಿ ರಿಜರ್ವ್ ಬ್ಯಾಂಕಿನವರು ತನಿಖೆ ನಡೆಸಿದ್ದಾರೆ. ಆಗ ಅಪರಾ-ತಪರಾ ನಡೆದಿರುವುದು ಗೊತ್ತಾಯಿತು. ೧೯೭೭-೭೮ರ ಲೆಕ್ಕಪರಿಶೋಧನಾ ವರದಿ ಇನ್ನೂ ಪೂರ್ಣಗೊಂಡಿಲ್ಲ. ಅಷ್ಟರೊಳಗೆ ರಿಜರ್ವ್ ಬ್ಯಾಂಕಿನವರು ಗೋಪ್ಯ ವರದಿಯೊಂದನ್ನು ಕಳುಹಿಸಿಕೊಟ್ಟರು.

ಶ್ರೀ ಪಿ. ರಾಮದೇವ್.—ಅವ್ಯವಹಾರ ನಡೆದಿರುವುದು ೧೯೭೬-೭೭ನೇ ಸಾಲಿನಲ್ಲಿಯೇ ? ಅಥವಾ ಅದರ ಹಿಂದಿನ ಸಾಲಿನದೆ ? ಮತ್ತು ಈ ಹಿನ್ನೆಲೆಯಲ್ಲಿ ಇಲಾಖಾ ಲೆಕ್ಕ ಪರಿಶೋಧನೆ ವಿಭಾಗವನ್ನು ಬಲಪಡಿಸುವುದಕ್ಕೆ ಕ್ರಮ ತೆಗೆದುಕೊಳ್ಳಲಾಗುವುದೆ ?

ಶ್ರೀ ವಿ. ಎಂ. ಕುಸನೂರ್.—ಅವ್ಯವಹಾರ ನಡೆದಿರುವುದು ೧೯೭೬-೭೭ನೇ ಸಾಲಿನಲ್ಲಿ. ಇದಕ್ಕೆ ಮೊದಲು ಆಗಿಲ್ಲ. ೧೯೭೨ನೇ ಅಕ್ಟೋಬರ್ ತಿಂಗಳಲ್ಲಿ ರಿಜರ್ವ್ ಬ್ಯಾಂಕಿನವರು ಇದನ್ನು ಕಂಡುಹಿಡಿದರು. ಇಲಾಖಾ ಲೆಕ್ಕ ಪರಿಶೋಧನೆ ವಿಭಾಗದ ಬಗ್ಗೆ, ಇಲಾಖಾ ಬೇಡಿಕೆ ಮೇಲೆ ಚರ್ಚೆ ನಡೆಯುವಾಗ ವಿಸ್ತಾರವಾಗಿ ಹೇಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಬ್ಯಾಂಕಿನ ನೌಕರರು ಹಣ ದುರುಪಯೋಗ ಮಾಡಿರುವುದಕ್ಕಾಗಿ ಅವರನ್ನು ಸಸ್ಪೆಂಡ್‌ನಲ್ಲಿಡಲು ಆದೇಶ ಕಳುಹಿಸಲಾಗಿದೆ ಎಂದು ಸಚಿವರು ತಿಳಿಸಿದರು. ಜಿಲ್ಲಾ ಬ್ಯಾಂಕಿನ ಅಧ್ಯಕ್ಷರು ಮತ್ತು ಆಡಳಿತ ಮಂಡಲಿ ಸದಸ್ಯರು ದುಡ್ಡು ಹೊಡೆದಿರುವ ಕಡೆಗಳಲ್ಲಿ ಅವರನ್ನು ಸಸ್ಪೆಂಡ್ ಮಾಡಿ, ಅವರ ಮೇಲೆ ಕ್ರಮ ಜರುಗಿಸಲಾಗುವುದೆ ?

ಶ್ರೀ ವಿ. ಎಂ. ಕುಸನೂರ್.—ಅವರನ್ನು ಸಸ್ಪೆಂಡ್ ಮಾಡುವುದಕ್ಕೆ ಬರುವುದಿಲ್ಲ. ಹಣದ ದುರುಪಯೋಗವಾಗಿದ್ದರೆ ಆಡಳಿತ ಮಂಡಲಿಯನ್ನು ರದ್ದುಪಡಿಸಿ, ಅಲ್ಲಿಗೆ ಆಡಳಿತಾಧಿಕಾರಿಯನ್ನು ನೇಮಕ ಮಾಡಲಾಗುವುದು,

SRI H. D. DEVE GOWDA.—As Chairman of the P. A. C. I have pointed out various irregularities committed by the non-officials. The Government has enough power to punish those people and take action against such persons ?

SRI V. M. KUSNUR.—It is a General question. It does not relate to the present question.

ಶ್ರೀ ಕೆ. ಪೆಚ್. ಹನುಮೇಗೌಡ.—ಸ್ವಾಮಿ, ಸೊಸೈಟಿಗಳ ದುಡ್ಡು ಮಾತ್ರ ದುರುಪಯೋಗ ವಾಗಿದೆ ಎಂದು ಹೇಳಿದ್ದೀರಿ. ಬ್ಯಾಂಕಿನ ದುಡ್ಡು ಕೂಡ ಲಕ್ಷಾಂತರ ರೂಪಾಯಿ ದುರುಪಯೋಗವಾಗಿದೆ ಅದಕ್ಕೆ ರೂಲ್ಸ್ ಇಲ್ಲ, ರೆಗ್ಯೂಲೇಷನ್ ಇಲ್ಲ, ಕಾನೂನು ಇಲ್ಲ. ಅಲ್ಲಿ ನಾನ್ ಆಫಿಷಿಯಲ್ಸ್ ಸೇರಿ ಕೊಂಡು ಮಾಡಬಾರದ್ದು ಮಾಡಿದ್ದಾರೆ. ಆ ವ್ಯವಹಾರಗಳನ್ನು ಹೇಳುವುದಕ್ಕೆ ನಾಚಿಕೆಯಾಗುತ್ತದೆ. ರಿಸರ್ವ್ ಬ್ಯಾಂಕಿನವರು ೪೦-೫೦ ಪುಟಗಳಷ್ಟು ಅಲಿಗೇಷನ್ ಬರೆದಿಟ್ಟಿದ್ದಾರೆ. ಈ ರೀತಿ ಆದರೆ ಲಕ್ಷಾಂತರ ಜನ ರೈತರ ಗತಿ ಏನು ? ಇದರ ಬಗ್ಗೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ವಿ. ಎಂ. ಕುಸನೂರ್.—ನಾನು ಈಗಾಗಲೇ ಹೇಳಿದ ಹಾಗೆ ಎನ್‌ಕ್ವೈರಿ ಫೈನಲ್ ರಿಪೋರ್ಟ್ ಬಂದಿಲ್ಲ. ಫೈನಲ್ ರಿಪೋರ್ಟ್ ಬಂದಮೇಲೆ ಯಾರ ಯಾರ ಮೇಲೆ ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ. ಈ ವಿಚಾರದಲ್ಲಿ ಯಾರಿಗೂ ಪೆದರುವ ಪ್ರಶ್ನೆಯೇ ಇಲ್ಲ.

Drinking Water Facilities in Arakalgud Taluk

143. SRI K. B. MALLAPPA (Arakalgud).— Will the Minister for Rural Development and Panchayati Raj be pleased to state ;—

(*a*) the number of villages having drinking water facilities and the number of villages for which drinking water facilities have to be provided :

(*b*) the number of drinking water wells and bore wells at present;

(*c*) out of the above bore wells, the number of bore wells which are under use ;

(*d*) whether any alternative arrangements have been made where the bore wells could not be used in some of the villages ;

(*e*) the number of wells and bore wells facilities in existance in Harijan colonies and the number of colonies for which water facilities have to be provided ?

SRI K. PRABHAKAR (Minister for Rural Development and Panchayati Raj).—

(*a*) All the 258 villages of Arakalgud taluk have been provided with drinking water facilities.

(*b*) 1. Drinking water wells ... 790
2. Bore wells ... 282

(*c*) 215.

(*d*) Yes.